ರಾಜ್ಯ ಹಾಗೂ ಕೇಂದ್ರ ವಲಯದ ಮೂಲಕ ಮಂಜೂರಾದ ಕುಡಿಯುವ ನೀರಿನ ಯೋಜನೆಗಳು

242 - ಶೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಒಟ್ಟು ಎಷ್ಟು ರಾಜ್ಯ ಹಾಗೂ ಕೇಂದ್ರ ವಲಯದಲ್ಲಿ ಎಂಡಬ್ಲ್ಯೂಎಸ್ ಎಸ್‌ಆರ್‌ಡಬ್ಲ್ಯೂ ಹಾಗೂ ಎಆರ್ ಡಬ್ಲ್ಯೂ ಸೇರಿನ ಅನ್ವಯ ಕುಡಿಯುವ ನೀರಿನ ಯೋಜನೆಗಳನ್ನು ಮಂಜೂರು ಮಾಡಿದೆ.

(ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಯೋಜನೆಗಳ ಮಂಜೂರಾತಿಗೆ ಸರ್ಕಾರ ಯಾವ ನಿಯಮ ಅನುಸರಿಸುತ್ತದೆ?

ಇ) ಮಲೆನಾಡು ಪ್ರದೇಶಗಳಲ್ಲಿ ಜನಸಂಖ್ಯೆ ಪರಿಮಿತಿ ಅಡ್ಡ ಬರುತ್ತಿರುವುದರಿಂದ, ಸರ್ಕಾರ ಅಲ್ಲಿ ಯಾವ ರೀತಿ ಮಂಜೂರಾತಿ ನಿಯಮ ಅನುಸರಿಸುತ್ತಿದೆ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯ (ಎನ್‌ಆರ್‌ಡಬ್ಲ್ಯೂ)ಮತ್ತು ಕೇಂದ್ರ (ಎಆರ್‌ಡಬ್ಲ್ಯೂ) ವಲಯಗಳಲ್ಲಿ ಮಂಜೂರು ಮಾಡಿರುವ ಕಿರು ನೀರು ಸರಬರಾಜು ಯೋಜನೆಗಳು ಕೆಳಕಂಡಂತಿವೆ.

ವರ್ಷ	ರಾಜ್ಯವಲಯ	ಕೇಂದ್ರವಲಯ	ಒಟ್ಟು
1990-91	583	384	967
1991-92	777	528	1305
1992-93	606	600	1206
ಒಟ್ಟು	1966	1512	3478

(ಜಿಲ್ಲಾವಾರು ಮಾಹಿತಿ ಲಗತ್ತಿಸಲಾಗಿದೆ)

ಈಗ ಜನಸಂಖ್ಯೆ, 500ಕ್ಕಿಂತ ಜಾಸ್ತಿ ಇರುವ ಗ್ರಾಮಗಳಿಗೆ ಕಿರು ನೀರು ಸರಬರಾಜು ಯೋಜನೆಗಳನ್ನು ಮಂಜೂರು ಮಾಡಲಾಗುತ್ತಿದೆ.

ಮಲೆನಾಡು ಪ್ರದೇಶದಲ್ಲಿ ಎತ್ತರ ಪ್ರದೇಶದಲ್ಲಿರುವ ಗ್ರಾಮಗಳಿಗೆ ನಿಯಮಾವಳಿಗಳ ಪ್ರಕಾರ ಕೊಳವೆ ಅಥವಾ ಕಿರು ನೀರು ಸರಬರಾಜು ಯೋಜನೆಗಳನ್ನು ಮಂಜೂರು ಮಾಡಲಾಗದಿದ್ದರೆ ಕೊಳವೆಬಾವಿಗಳನ್ನು ತೋಡಬೇಕಾಗುತ್ತದೆ. ಈ ಗ್ರಾಮಗಳಲ್ಲಿ ಕೊಳವೆ ಬಾವಿಗಳು ಸಫಲವಾಗದಿದ್ದಲ್ಲಿ, ಇವುಗಳಿಗೆ ನದಿ: ಝರಿಯ ದಡಗಳೇ ಮೇಲೆ ತೆರೆದ ಬಾವಿಗಳನ್ನು ಆಳವಡಿಸಿ ಪೈಪುಗಳ ಮೂಲಕ ನೀರನ್ನು ಸರಬರಾಜು ಮಾಡುವ ಯೋಜನೆಗಳನ್ನು ಮಂಜೂರು ಮಾಡಬೇಕಾಗುತ್ತದೆ. ಆದುದರಿಂದ, ಈಗಿರುವ ಜನಸಂಖ್ಯೆ ಮಿತಿಯನ್ನು ಸಡಿಲಗೊಳಿಸುವ ಪ್ರಸ್ತಾವನೆಯೊಂದನ್ನು ಸರ್ಕಾರವು ಪರಿಶೀಲಿಸುತ್ತಿದೆ.

ರಾಜ್ಯ ಮತ್ತು ಕೇಂದ್ರ ವಲಯದಲ್ಲಿ 1990-91, 1991-92 ಮತ್ತು 1992-93ರ ಸಾಲಿನಲ್ಲಿ ಮಂಜೂರಾದ ಕಿರು ನೀರು ಸರಬರಾಜು ಯೋಜನೆಗಳು.

ಸಂಖ್ಯೆ	ಜಿಲ್ಲೆಯ ಹೆಸರು	1990-91			1991-92			1992-93		
		ರಾಜ್ಯ	ಕೇಂದ್ರ	ಒಟ್ಟು	ರಾಜ್ಯ	ಕೇಂದ್ರ	ಒಟ್ಟು	ರಾಜ್ಯ	ಕೇಂದ್ರ	ಒಟ್ಟು
1	2	3	4	5	6	7	8	9	10	11
1.	ಬೆಂಗಳೂರು ಗ್ರಾಮಾಂತರ	30	16	46	29	50	79	49	54	108
2.	ಬೆಂಗಳೂರು (ನಗರ)	6	25	3	45	44	89	20	27	47
3.	ಕೋಲಾರ	47	16	63	48	28	76	79	78	157
4.	ತುಮಕೂರು	38	32	70	74	34	108	84	67	148
5.	ಚಿತ್ರದುರ್ಗ	44	26	12	17	18	35	69	48	117
6.	ಶಿವಮೊಗ್ಗ	5	3	44	25	56	81	19	19	38
7.	ಚಿಕ್ಕಮಗಳೂರು	26	1	42	39	34	73	33	35	68
8.	ಮೈಸೂರು	77		83	120	30	150	10	21	31
9.	ಮಂಡ್ಯ	27	13	40	27	10	37	43	29	72
10.	ಹಾಸನ	31	3	66	26	24	40	89	58	147
11.	ದಕ್ಷಿಣ ಕನ್ನಡ	24	7	41	13	8	21	5	3	8
12.	ಕೊಡಗು	5		6	3	14	17	3	8	11

13.	ಬೆಳಗಾಂ	44	2	69	69	13	82	21	39	60
14.	ಧಾರವಾಡ	67	1	86	46	41	87	18	41	59
15.	ಉತ್ತರ ಕನ್ನಡ	16		25	23	9	32	4	10	14
16.	ಬಿಜಾಪುರ	26	1	44	40	48	88	15	37	52
17.	ಗುಲಬರ್ಗಾ	3		11	69	48	117	-	2	2
18.	ಬೀದರ್	17	16	27	30	6	36	-	-	-
19.	ರಾಯಚೂರು	29	3	47	23	-	23	20	15	35
20.	ಬಳ್ಳಾರಿ	41		54	11	13	24	25	12	37
	ಒಟ್ಟು	583	384	967	777	528	1305	606	600	1206